**ಓ ಎಸ್ ನಂಃ 366/16**
**ಪಿ ಡಬ್ಲ್ಯೂ ಃ 1**

**ದಿಃ 19.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಜಿ ಆರ್ ವಕೀಲರಿಂದ**

ಚೆನ್ನ ಉರುಫ್ ದ್ಯಾವಯ್ಯರವರ 2ನೇ ಮಗನನ್ನು ಪುಟ್ಟಚೆನ್ನಯ್ಯ ಉರುಫ್ ಚೆನ್ನಯ್ಯ ಎಂದು ಕರೆಯುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತನ್ನು ತಮ್ಮ ತಾಯಿಯವರು ಚೆನ್ನಮ್ಮ ಬಿನ್ ಹುಚ್ಚಯ್ಯರವರಿಂದ ಕ್ರಯಕ್ಕೆ ಪಡೆದಿದ್ದಾರೆ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಪಿ 1ರಲ್ಲಿ ವೃತ್ತಾಕಾರ ಮಾಡಿರುವ ಚೆನ್ನಮ್ಮ ಬಿನ್ ಹುಚ್ಚಯ್ಯರವರ ಹೆಸರಿನಲ್ಲಿ ದಾವಾ ಸ್ವತ್ತಿಗೆ ಸಂಬಂದಪಟ್ಟಂತೆ ಖಾತೆ ಇತ್ತು ಎಂದರೆ ಸರಿ. ತಮ್ಮ ತಾಯಿಯವರ ಹೆಸರಿಗೆ ಕಾನೂನು ಬಾಹಿರವಾಗಿ ಚೆನ್ನಮ್ಮ ಬಿನ್ ಹುಚ್ಚಯ್ಯ ಎಂದರೆ ಈ ದಾವೆಯ ಪ್ರತಿವಾದಿಯ ಹೆಸರಿಗೆ ವೃತ್ತಾಕಾರ ಮಾಡಿ ಖಾತೆ ವರ್ಗಾವಣೆ ಮಾಡಿರುತ್ತಾರೆ ಎಂದರೆ ಸರಿ. ಈ ದಾವೆಯನ್ನು ಹೂಡುವ ಸಂದರ್ಭದಲ್ಲಿ ಪ್ರತಿವಾದಿ ಜೀವಂತವಾಗಿದ್ದರು ಎಂದರೆ ಸರಿ. ಚೆನ್ನಮ್ಮರವರು ಜೀವಂತವಾಗಿದ್ದಾಗ ಅವರು ಸತ್ತುಹೋಗಿದ್ದಾರೆ ಎಂದು ಅವರ ಹೆಸರನ್ನು ವೃತ್ತಾಕಾರ ಮಾಡಿ ತಮ್ಮ ತಾಯಿಯವರ ಹೆಸರಿಗೆ ದಾವಾ ಸ್ವತ್ತಿನ ಖಾತೆಯನ್ನು ಫವತಿ ವಾರಸು ಖಾತೆ ಮಾಡಿದ್ದಾರೆ ಎಂದರೆ ಸರಿ. ತಮ್ಮ ತಾಯಿಯವರ ಹೆಸರಿಗೆ ಯಾವ ದಾಖಲಾತಿ ಮೇಲೆ ಖಾತೆ ವರ್ಗಾವಣೆ ಮಾಡಿದ್ದಾರೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಗೊತ್ತಿಲ್ಲ. ಈ ದಾವೆಯ ಪ್ರತಿವಾದಿ ಚೆನ್ನಮ್ಮ ಬಿನ್ ಹುಚ್ಚಯ್ಯರವರು 1983ರಲ್ಲಿ ಹಾಗೂ ಈ ದಾವೆಯನ್ನು ಹೂಡುವ ಸಂದರ್ಭದಲ್ಲಿ ಬದುಕಿದ್ದರು ಎಂದರೆ ಸರಿ. ಈ ದಾವೆಯ ಪ್ರತಿವಾದಿಯು ತಮ್ಮ ಕುಟುಂಬಕ್ಕೆ ಸೇರಿದ ಸದಸ್ಯರು ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಚೆನ್ನಮ್ಮ ಬಿನ್ ಹುಚ್ಚಯ್ಯರವರು ಜೀವಂತವಿದ್ದ ಕಾಲದಲ್ಲಿ ಅವರು ಮರಣ ಹೊಂದಿದ್ದಾರೆ ಎಂದು ತಾವು ಹೇಳಿ ತಮ್ಮ ತಾಯಿಯ ಹೆಸರಿಗೆ ದಾವಾ ಸ್ವತ್ತಿನ ಖಾತೆಯನ್ನು 1ರ ಪ್ರಕಾರ ಮಾಡಿಸಿಕೊಂಡಿದ್ದೀರಿ ಎಂದರೆ ಸಾಕ್ಷಿ ಅವರು ಸತ್ತು ಹೋಗಿದ್ದಾರೆ ಎಂದು ನಾವು ಮಾಡಿಸಿಕೊಂಡಿಲ್ಲ ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**